ಓ.ಎಸ್. ನಂ. 45/2021 ಡಿ.ಡಬ್ಲ್ಯೂ- 1

**ಸಾಕ್ಷಿಯನ್ನು ದಿನಾಂಕ 26.10.2024 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಕೆ.ಆರ್ ವಕೀಲರಿಂದಃ**

ನಿಡಿ12 ರಿಂದ ನಿಡಿ18 ದಾಖಲೆಗಳನ್ನು ಪಡೆದುಕೊಳ್ಳಲು ಮಾಹಿತಿ ಹಕ್ಕಿನಡಿ ನಾನೇ ಅರ್ಜಿಯನ್ನು ಸಲ್ಲಿಸಿರುತ್ತೇನೆ. ಸದರಿ ಅರ್ಜಿಯನ್ನು 3-4 ತಿಂಗಳ ಹಿಂದೆ ನೀಡಿರುತ್ತೇನೆ. ನಾನು ನೋಂದಣಿ ಕಛೇರಿಯಲ್ಲಿ ಮಾಹಿತಿಯನ್ನು ಕೇಳಿರುತ್ತೇನೆ. ನಾನು ಮಾಹಿತಿ ಹಕ್ಕಿನಡಿ ನೀಡಿರುವ ಅರ್ಜಿಯ ಪ್ರತಿ ನನ್ನ ಬಳಿ ಇದ್ದು ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಿಡಿ12 ರಿಂದ ನಿಡಿ18 ದಾಖಲೆಗಳನ್ನು ನಾನೇ ನೋಂದಣಿ ಕಛೇರಿಗೆ ಹೋಗಿ ಪಡೆದುಕೊಂಡಿರುತ್ತೇನೆ. ಸದರಿ ದಾಖಲೆಗಳನ್ನು ಪತ್ರದ ಜೊತೆ ನೀಡಿರುತ್ತಾರೆ ಎಂದರೆ ಸರಿ. ಸದರಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿದಾರರು ಮನೆಯಲ್ಲಿದ್ದರೆ ಹಾಜರುಪಡಿಸುತ್ತೇನೆ ಎನ್ನುವರು. ಮಾಹಿತಿ ನೀಡುವ ಅಧಿಕಾರಿಯು ಪತ್ರದಲ್ಲಿ ಎಷ್ಟು ದಾಖಲೆಯನ್ನು ನೀಡುತ್ತಿದ್ದೇನೆ ಮತ್ತು ಅದರ ಪುಟಗಳ ಸಂಖ್ಯೆಯನ್ನು ನಮೂದು ಮಾಡುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಮಾಹಿತಿ ಹಕ್ಕಿನಡಿ ಯಾವುದೇ ದಾಖಲೆಯನ್ನು ಖುದ್ದಾಗಿ ಕೈಗೆ ನೀಡುವುದಿಲ್ಲ, ಅಂಚೆ ಮೂಲಕ ಕಳುಹಿಸುತ್ತಾರೆ ಎಂದರೆ ಸಾಕ್ಷಿದಾರರು ನನಗೆ ಅವಶ್ಯಕತೆ ಇದುದ್ದರಿಂದ 2-3 ಬಾರಿ ನೋಂದಣಿ ಕಛೇರಿಗೆ ಹೋಗಿ ಕೇಳಿದ್ದರಿಂದ ಕೈಗೆ ನೀಡಿರುತ್ತಾರೆ ಎನ್ನುವರು. ನಿಡಿ12 ರಿಂದ ನಿಡಿ18 ದಾಖಲೆಗಳನ್ನು ನಾನು ಮಾಹಿತಿ ಹಕ್ಕಿನಡಿ ಪಡೆದುಕೊಂಡಿರುವುದಿಲ್ಲ, ಅವುಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಡಿ2 ಖಾತೆಯು ನನ್ನ ಹೆಸರಿಗೆ ಯಾವ ಆಧಾರದ ಮೇಲೆ ಆಗಿರುತ್ತದೆ ಎಂದರೆ ಸಾಕ್ಷಿದಾರರು ಕ್ರಯಪತ್ರದ ಅಧಾರದ ಮೇಲೆ ಆಗಿರುತ್ತದೆ ಎನ್ನುವರು. ನನ್ನ ಹೆಸರಿಗೆ ಖಾತೆಯು ನಿಡಿ18 ಮತ್ತು ನಿಡಿ19ರ ಆಧಾರದ ಮೇರೆಗೆ ಆಗಿರುತ್ತದೆ. ನಿಡಿ18 ಮತ್ತು ನಿಡಿ19ರಲ್ಲಿ ಕೆಂಪುಗಾರೆ ಎಂದು ನಮೂದಾಗಿದ್ದು, ನಿಡಿ2ರಲ್ಲಿ ನೆಲಮಹಡಿ ಆರ್.ಸಿ.ಸಿ ಮೊಜಾಯಿಕ್, ಮೊದಲನೇ ಮಹಡಿ ಆರ್.ಸಿ.ಸಿ ಮೊಜಾಯಿಕ್ ಎಂದು ನಮೂದಾಗಿದ್ದು ಯಾವ ದಾಖಲಾತಿ ಆಧಾರದ ಮೇಲೆ ಆಗಿರುತ್ತದೆ ಎಂದರೆ ಸಾಕ್ಷಿದಾರರು ನಾನು ಇ-ಖಾತೆ ಮಾಡಲು ಅರ್ಜಿ ನೀಡಿದಾಗ ಪಂಚಾಯಿತಿ ಕಛೇರಿಯಿಂದ ಫೀಲ್ಡ್ ಆಫೀಸರ್ ಮನೆಗೆ ಭೇಟಿ ಪರಿಶೀಲನೆ ಮಾಡಿ ಖಾತೆ ಮಾಡಿರುತ್ತಾರೆ ಎನ್ನುವರು. ನಿಡಿ18 ಮತ್ತು ನಿಡಿ19ರಲ್ಲಿ ನೆಲ ಮಹಡಿ ಮತ್ತು ಮೊದಲನೆ ಮಹಡಿ ಎಂದು ನಮೂದಾಗಿರುವುದಿಲ್ಲ ಎಂದರೆ ಸರಿ. ವಾದಿಗೆ ಮೋಸ ಮಾಡಲು ನಾನು ಉದ್ದೇಶಪೂರ್ವಕವಾಗಿ ನೆಲಮಹಡಿ ಮತ್ತು ಮೊದಲನೇ ಮಹಡಿ ಎಂದು ಸೇರಿಸಿ ಖಾತೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಯು ನನಗೆ ನೆಲಮಹಡಿಯನ್ನು ಮಾತ್ರ ಮಾರಾಟ ಮಾಡಿದ್ದು, ಮೊದಲನೇ ಮಹಡಿ ಮತ್ತು ಹಾಗೂ ಅದರ ಮೇಲೆ ಇರುವ ಶೀಟ್ ಮನೆಗೆ ಯಾವುದೇ

ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ನಿಡಿ2 ರಲ್ಲಿ ಮೊದಲನೇ ಮಹಡಿಯ ಮೇಲಿರುವ ಶೀಟ್ ಮನೆಯ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ನಿಪಿ9 ರಂತೆ ವಸ್ತುಸ್ಥಿತಿಯಲ್ಲಿ ಮೊದಲ ಮಹಡಿ ಹಾಗೂ ಅದರ ಮೇಲೆ ಶೀಟ್ ಮನೆ ಇರುತ್ತದೆ ಎಂದರೆ ಸರಿ. ವಾದಿಗೆ ಕಿವಿ ಕೇಳಿಸುವುದಿಲ್ಲ ಮತ್ತು ಕಣ್ಣು ಕಾಣಿಸುವುದಿಲ್ಲ ಹಾಗೂ ಅವರ ನನ್ನ ಮೇಲೆ ಇಟ್ಟಿರುವ ನಂಬಿಕೆಯನ್ನು ದುರುಪಯೋಗಪಡಿಸಿಕೊಂಡು ನೆಲಮಹಡಿ ಹಾಗೂ ಮೊದಲನೇ ಮಹಡಿ ಎಂದು ಖಾತೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿಪಿ37 ರ ಆಧಾರದ ಮೇಲೆ ಖಾತೆ ಮಾಡಿಸಿಕೊಂಡಿರುತ್ತೇನೆ ಎಂದರೆ ಸಾಕ್ಷಿದಾರರು ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎನ್ನುವರು. ಹಿಂದಿನ ದಾಖಲೆಗಳ ಆಧಾರದ ಮೇಲೆ ನಂತರ ಆಗುವ ದಾಖಲೆಗಳಲ್ಲಿ ಪಂಚಾಯಿತಿಯಲ್ಲಿ ನಮೂದು ಮಾಡುತ್ತಾರೆ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ
(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಓ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.